ಓಂಚನ್ನೇಶ್, ಅರಬಿಳಚಿ ಕ್ಯಾಂಪ್
*ಹೃದಯವನ್ನು ಕದ್ದವಳು ನಾಳೆ ನನ್ನ ಪರ್ಸ್ ಕದಿಯುವುದಿಲ್ಲ ಅಂತ ಏನು ಗ್ಯಾರಂಟಿ?*



ಪ್ರೀತಿಗಿಂತ ಹಣ ಮುಖ್ಯವೇನು? ಹಾಗಾದರೆ ಆಕೆಯದು ರಾಂಗ್ ಛಾಯ್ಸ್!

ಆರ್. ಮಧುಸೂದನ್, ಹಾಸನ
*ನಿತ್ಯವೂ ಹೆಣ್ಣಿನ ಸೌಂದರ್ಯವನ್ನು ಕಣ್ತುಂಬಾ ನೋಡುವ ಕನ್ನಡಿಯ ಮನಸ್ಸಿನಲ್ಲಿ ಹರಿದಾಡುವ ಭಾವನೆಗಳೇನು?*
ಆನಂದದ ಭಾವವೇ ಇರಬೇಕು. ದುಃಖದ್ದೋ, ಅಸೂಯೆಯದ್ದೋ ಇದ್ದಿದ್ದರೆ ಕನ್ನಡಿಯ ಮುಖ ಗಂಟುಗಂಟಾಗಿರುತ್ತಿತ್ತು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಉತ್ತರಗಳ ಮೂಲಕ ನಿಮ್ಮ ಭಾವ ಪ್ರಕಟವಾಗಿದೆ. ನಿಮ್ಮ ಚಿತ್ರವನ್ನು ನಾವು ನೋಡುವುದು ಯಾವಾಗ ರಾಂಜಿ?*
'ಕಾಣೆಯಾಗಿದ್ದಾರೆ'ಯಲ್ಲಿ ಬರಲು ಸಾಧ್ಯವಿಲ್ಲ; 'ಚಿರಸ್ಮರಣೆ'ಗೆ ಬಹಳ ಕಾಯಬೇಕು; ತಾಳ್ಮೆ ಇರಲಿ ನರ್ಸಿಮ್ಮಣ್ಣ!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಹಣವಿಲ್ಲದ ಮತಪೆಟ್ಟಿಗೆಗಳಿಗೆ ಸ್ಟ್ರಾಂಗ್ ರೂಮ್ ಮತ್ತು ಪೊಲೀಸರ ಕಾವಲೇಕೆ?*



ಓಟ್ ಇರತ್ತಲ್ಲ! ಒಂದೊಂದು ಓಟಿಗೆ ಐದ್ನೈದು ಸಾವಿರ! ಬ್ಯಾಲೆಟ್ ಬಾಕ್ಸ್, ಕ್ಯಾಷ್ ಬ್ಯಾಕ್ಸ್‌ಗಿಂತ ವ್ಯಾಲ್ಯುಯೆಬಲ್ಲು ಮೇಡಂ!

ಕುಮಾರ ಚಲವಾದಿ, ಹೊಳೆನರಸಿಪುರ
*ಕುರಿ, ಕೋಳಿಗಳನ್ನು ಹೆಣ್ಣು ದೇವರಿಗೆ ಬಲಿ ನೀಡುತ್ತಾರೆ; ಗಂಡು ದೇವರಿಗೇಕಿಲ್ಲ?*
ಕೊಯ್ದು ಅಡಿಗೆ ಮಾಡುವುದು ಹೆಣ್ಣೇ ತಾನೆ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ; ಅತ್ತೆ ಸೊಸೆಯರ ಜಗಳ?*
ಸೀರಿಯಲ್‌ನಂತೆ; ರಾತ್ರಿಯ ಬ್ರೇಕ್‌ನ ನಂತರ ಮತ್ತೆ ಮುಂದುವರೆಯುತ್ತದೆ!

ಕಾಡನೂರು ರಾಮಶೇಷ, ಹುಲಿಮಂಗಲ
*ಈ ಬಾಡಿ ಡೆಡ್‌ಬಾಡಿಯಾಗುವುದು ಖಚಿತ ಎಂದು ತಿಳಿದಿದ್ದರೂ ಈ ಬಾಡಿಯ ಮೇಲೆ ನಮಗೇಕೆ ವ್ಯಾಮೋಹ?*
ಬಾಡಿ ಇರುವವರೆಗೂ ಸಮ್‌ಬಾಡಿ ಎಂದು ಕರೆಸಿಕೊಳ್ಳಲು ಐಡೆಂಟಿಟಿ ಬೇಕಲ್ಲ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ
*ಮಾಜಿ ಎಣ್ಣೆಮಂತ್ರಿಗಳ ಮುಂದಿನ ಯೋಜನೆಗಳೇನು?*
ಮರಳಿ ಹೆಂಡವ ಹಂಚು ಸಚಿವ ಸೀಟು ಹಿಡಿಯುವ ತನಕ!

ಗಣೇಶ ಎಂ. ಪೈ, ಚಿಕ್ಕಮಗಳೂರು
*ಮದುವೆಯ ನಂತರ ತೆಗೆದುಕೊಂಡ ಗಟ್ಟಿಮುಟ್ಟಾದ ಹೊಸ ಪಾತ್ರೆಗಳು ಹೊಳಪನ್ನು, ಆಕಾರವನ್ನು ಕಳೆದುಕೊಳ್ಳುತ್ತಿವೆಯಲ್ಲಾ?*
ಕೋಪಿಷ್ಟ ಸತಿಯ ಕೈಗೆ ಕೋಲು ಸಿಗುವಂತೆ ಇಡಿ; ಪಾತ್ರೆಗಳು ನುಗ್ಗಾಗದೆ ಉಳಿದಾವು!

ನೇ.ಗೋ.ಭ, ಕುಕ್ಕೆಸುಬ್ರಹ್ಮಣ್ಯ
*ಸಾಹಿತಿಗಳು ರಾಜಕೀಯ ಪಕ್ಷಗಳ ಬೆಂಬಲಕ್ಕೆ ಹೋಗಬಾರದು ಎಂಬ ವಾದ ಇದೆಯಲ್ಲಾ...?*
ನಿಜ. ಅದು ಸಾಹಿತಿಗಳಿಗೆ ಮಾತ್ರ ಅನ್ವಯಿಸುತ್ತದಂತೆ, ಜ್ಞಾನಪೀಠಿಗಳಿಗಲ್ಲವಂತೆ!

ನವಿರವಿ, ಬಾಳೆಹೊನ್ನೂರು
*ಹಿಂದಿ ಚಿತ್ರರಂಗದ ನಟರಿಗೂ, ಮೀಸೆಗೂ ಆಗಿಬರಲ್ವಾ?*
ಚಾಕೊಲೇಟ್ ಹೀರೋಗಳಲ್ಲವೇ; ಚಾಕೊಲೇಟಲ್ಲಿ ಕೂದಲು ಸಿಕ್ಕಿದರೆ ಚೆನ್ನಾಗಿರಲ್ಲ!

ಆರಿಫ್, ದಾವಣಗೆರೆ
*ಪವಿತ್ರವಾದ ಪ್ರೀತಿ ಎಂದರೆ ಯಾವುದು?*
ಏಸು, ಪೈಗಂಬರ್, ಬುದ್ಧ, ಕೃಷ್ಣ ತೋರಿಸಿದ ಜಗತ್ಪ್ರೀತಿ.

ಬಿ.ಎನ್. ಸೊಲ್ಲಾಪುರ, ಬೀದರ್
*ಇಂದಿನ ಚುನಾವಣೆಗಳಲ್ಲಿ ಗೆದ್ದವರು ಗೆದ್ದಂತಿಲ್ಲ, ಸೋತವರು ಸೋತಂತಿಲ್ಲ ಎನ್ನುವರಲ್ಲಾ, ಏಕೆ?*
ಸರಿಯೇ; ಗೆದ್ದವರ ಹಗರಣದ ಲಿಸ್ಟ್ ಎಂಬ ಸೂತ್ರವನ್ನು ಸೋತವರು ಹಿಡಿದಿರುತ್ತಾರಲ್ಲ!

## ಬಹುಮಾನಿತ ಪ್ರಶ್ನೆ

ಮಹೇಶ ಈರಣ್ಣ, ಲಿಂಗಸುಗೂರು
*ಕೆಲವರಿಗೆ ಮನಸ್ಸಿನಲ್ಲಿ ಇರಬೇಕಾದ ದೇವರು ಮೈಯಾಗ ಯಾಕ ಬರತಾವ?*
ಮನಸ್ಸಿನಲ್ಲಿ ಜನಕ್ಕೆ ಟೋಪಿ ಹಾಕಬೇಕೆಂಬ ಭೂತ ಇರುತ್ತದಲ್ಲ, ಸ್ಥಾನ ಕಳೆದುಕೊಂಡ ದೇವರು ಮೈಯಾಗ ಬರ್ತಾನ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಬ್ಲ್ಯಾಂಕ್ ಚೆಕ್ಕಿಗೂ, ತುಂಬಿದ ಚೆಕ್ಕಿಗೂ ಏನು ವ್ಯತ್ಯಾಸ?*
ಬ್ಲ್ಯಾಂಕ್ ಚೆಕ್ ಆಶ್ವಾಸನೆ, ತುಂಬಿದ ಚೆಕ್ ಹಗರಣ!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ಸಿನೆಮಾ ತಾರೆಯರಿಗೆ ಸಿನೆಮಾರಂಗದಲ್ಲಿಲ್ಲದ ಮಜ ರಾಜಕೀಯದಲ್ಲಿ ಏನಿದೆ?*
ಸಿನೆಮಾ ಹೆಚ್ಚೆಂದರೆ ಹಂಡ್ರೆಡ್ ಡೇಸ್ ಓಡೀತು. ಇಲ್ಲಿ ಗೆದ್ದರೆ ಮಿನಿಮಮ್ ಐದು ವರ್ಷ ಓಡಬಹುದಲ್ಲ!

ಎಚ್.ಆರ್. ದೇಸಾಯಿ, ರಾಯಚೂರು
*ಬ್ರಹ್ಮಲಿಪಿಗೂ, ಡಾಕ್ಟರ್ ಲಿಪಿಗೂ ಏನು ವ್ಯತ್ಯಾಸ?*



ಬ್ರಹ್ಮಲಿಪಿಯಲ್ಲಿ ಓವರ್‌ಡೋಸ್ ಇಲ್ಲವೇ ಇಲ್ಲ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ರಾಜಕೀಯಕ್ಕೆ ಫಲವತ್ತಾದ ನೆಲ ಯಾವುದು?*
ಕುತ್ಸಿತ ಮನಸ್ಸು.

ಶ್ಯಾಮಸುಂದರ, ಬೆಂಗಳೂರು
*ಪ್ರಸ್ತುತ ಪರಿಸ್ಥಿತಿಯಲ್ಲಿ ಉತ್ತಮರಲ್ಲಿ ಉತ್ತಮ, ಮಧ್ಯಮರಲ್ಲಿ ಮಧ್ಯಮ, ಅಧಮರಲ್ಲಿ ಅಧಮ ಯಾರಿರಬಹುದು?*
ಚುನಾವಣಾ ಅಭ್ಯರ್ಥಿ; ತನ್ನ ಪಕ್ಷದವರಿಗೆ ಉತ್ತಮರಲ್ಲಿ ಉತ್ತಮ; ಮಾಧ್ಯಮಗಳಿಗೆ ಮಧ್ಯಮ; ವಿರೋಧಿಗಳ ದೃಷ್ಟಿಯಲ್ಲಿ ಅಧಮ!

■ ರಾಮ್